ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಖಾಲಿ ಉಳಿದಿರುವ ಮೆರಿಟ್‌ಪೂಲ್ ಸ್ಥಾನಗಳನ್ನು ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ವರ್ಗಾವಣೆಯಿಂದ ತುಂಬಲಾಗುತ್ತದೆ. ಪ್ರವೇಶಕ್ಕೆ ಕೊನೆಯ ದಿನದಂದು ಉಳಿದ ಮೆರಿಟ್‌ಪೂಲ್ ಸ್ಥಾನಗಳನ್ನು ಆಡಳಿತ ಮಂಡಳಿಯವರು ತುಂಬಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತಾರೆ.

ಅನುಬಂಧ

ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು		ಪ್ರತಿಭಾ ಆಧಾರದ ಸ್ಥಾನಗಳು	
		ಮಂಜೂರಾದ ಸ್ಥಾನಗಳು	ಪ್ರವೇಶ ನೀಡಲಾದ ಸ್ಥಾನಗಳು
೧	ಆರ್. ವಿ. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	೧೮೦	೧೬೮
೨	ಎಂ. ಎಸ್. ಆರ್. ಇನ್ಸ್‌ಟಿಕ್ನಾಲಜಿ, ಬೆಂಗಳೂರು	೧೯೪	೧೯೦
೩	ದಯಾನಂದ ಸಾಗರ್ ಇಂ. ಕಾಲೇಜು, ಬೆಂಗಳೂರು	೧೬೨	೧೫೧
೪	ಬೆಂಗಳೂರು ಇನ್ಸ್. ಆಫ್ ಟೆಕ್. ಬೆಂಗಳೂರು	೧೪೬	೧೩೪
೫	ಡಾ॥ ಅಂಬೇಡ್ಕರ್ ಇನ್ಸ್. ಆಫ್ ಟೆಕ್. ಬೆಂಗಳೂರು	೧೧೭	೯೬
೬	ಸರ್. ಎಂ. ವಿ. ಇಂಜಿನಿ. ಕಾಲೇಜ್, ಬೆಂಗಳೂರು	೧೦೮	೧೦೨
೭	ಕೆ. ಎಲ್. ಇ. ಇಂಜಿನಿ. ಕಾಲೇಜ್, ಬೆಳಗಾಂವ	೭೨	೬೭
೮	ಕೆ. ಎಲ್. ಎಸ್. ಇಂಜಿನಿ. ಕಾಲೇಜ್, ಬೆಳಗಾಂವ	೧೦೧	೯೪
೯	ವಿಜಯನಗರ ಇಂಜಿನಿ. ಕಾಲೇಜ್, ಬಳ್ಳಾರಿ	೯೯	೯೦
೧೦	ರೂರಲ್ ಇಂಜಿನಿ. ಕಾಲೇಜ್, ಭಾಲ್ಕಿ	೬೮	೩೬
೧೧	ಬಿ. ಎಲ್. ಡಿ. ಇ. ಇಂಜಿನಿ. ಕಾಲೇಜ್, ಬಿಜಾಪುರ	೧೦೮	೧೦೦
೧೨	ಎಸ್. ಜೆ. ಸಿ. ಇನ್ಸ್ ಆಫ್ ಟೆಕ್. ಚಿಕ್ಕಬಳ್ಳಾಪುರ	೪೮	೪೭
೧೩	ಆದಿ ಚುಂಚನಗಿರಿ ಟೆಕ್. ಇನ್ಸ್. ಚಿಕ್ಕಮಗಳೂರು	೮೧	೮೦
೧೪	ಎಸ್. ಜೆ. ಎಂ. ಇಂಜಿನಿ. ಕಾಲೇಜ್, ಚಿತ್ರದುರ್ಗ	೯೬	೭೯
೧೫	ಬಾಪೂಜಿ ಇನ್ಸ್. ಆಫ್ ಇಂಜಿನಿ. ದಾವಣಗೆರೆ	೧೩೮	೧೧೩
೧೬	ಆರ್. ಟಿ. ಇ. ಇಂಜಿನಿ. ಕಾಲೇಜ್, ಹುಲಕೋಟಿ	೮೩	೬೩
೧೭	ಜಿ. ವಿ. ಇ. ಟ್ರಸ್ಟ್ ಇಂಜಿನಿ. ಕಾಲೇಜ್, ಕೆ. ಜಿ. ಎಫ್.	೪೮	೫೩
೧೮	ಎನ್. ಎಂ. ಎ. ಎಂ. ಐ. ಟಿ. ಇಂ. ಕಾ. ನಿಟ್ಟೆ	೧೦೮	೮೪
೧೯	ಹೆಚ್. ಕೆ. ಇ., ಎಸ್. ಎಲ್. ಎನ್. ಇಂ. ಕಾ. ರಾಯಚೂರು	೬೦	೪೭
೨೦	ಎಸ್. ಟಿ. ಜೆ. ಇಂ. ಕಾ. ರಾಣಿಬೆನ್ನೂರು	೭೧	೪೨
೨೧	ಎನ್. ಇ. ಎಸ್. ಇಂ. ಕಾಲೇಜು, ಶಿವಮೊಗ್ಗ	೭೫	೬೧
೨೨	ವೈ. ಎಲ್. ಇ. ಎಸ್. ಇಂ. ಕಾಲೇಜು, ಸೂಳ್ಯ	೫೪	೨೩
೨೩	ಕಲ್ಪತರು ಇನ್ಸ್. ಆಫ್ ಟೆಕ್. ತಿಪಟೂರು	೪೫	೪೬
೨೪	ಸಿದ್ಧಗಂಗಾ ಇನ್ಸ್. ಆಫ್ ಟೆಕ್. ತುಮಕೂರು	೨೦೭	೧೮೬
೨೫	ಸಿದ್ದಾರ್ಥ ಇನ್ಸ್. ಆಫ್ ಟೆಕ್. ತುಮಕೂರು	೧೦೨	೯೦
	ಒಟ್ಟು	೨೫೭೫	೨೨೪೬

ತರೀಕೆರೆ ತಾಲ್ಲೂಕಿನ ನೀರಾವರಿ ಯೋಜನೆಗಳ ಬಗ್ಗೆ

೧೪೬೧ (೨೯೦೬) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಕಿರು ನೀರಾವರಿ ಯೋಜನೆಗಳಿವೆ ?

ಆ) ಜಿಲ್ಲಾ ಪರಿಷತ್ತಿನಿಂದ ಈಗ ಕೇಳಿರುವ ತರೀಕೆರೆ ತಾಲ್ಲೂಕಿನ ಕಿರು ನೀರು ಯೋಜನೆಗೆ ಮಂಜೂರಾತಿ ಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಆ) ೧೭೨.

ಆ) ಚಿಕ್ಕಮಗಳೂರು ಜಿಲ್ಲಾ ಪರಿಷತ್ತು ಸಾಕಷ್ಟು ಅನುದಾನ ಒದಗಿಸಿಲ್ಲವಾದ್ದರಿಂದ, ಈ ಕಾಮಗಾರಿಗಳಿಗೆ ಮಂಜೂರಾತಿ ನೀಡಲು ಸಾಧ್ಯವಾಗಿಲ್ಲ.

ಹೋದಿರಾಯನಹಳ್ಳದಿಂದ ಜಂಬದಹಳ್ಳಕ್ಕೆ ನೀರು ತಿರುಗಿಸಲು ಯೋಜನೆ

೧೪೮೨ (೨೯೦೭) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) ತರೀಕೆರೆ ತಾಲ್ಲೂಕಿನ ಜಂಬದಹಳ್ಳ ಜಲಾಶಯಕ್ಕೆ ಹೋದಿರಾಯನಹಳ್ಳದಿಂದ ಪರಿವರ್ತನೆ ಯೋಜನೆ ಕಾರ್ಯರೂಪಕ್ಕೆ ತರಲು ಅರಣ್ಯ ಇಲಾಖೆಯಿಂದ ಸುಮಾರು ೧೨ ಎಕರೆ ಅರಣ್ಯ ಜಮೀನನ್ನು ಸ್ವಾಧೀನ ಪಡೆಯಲು ಭದ್ರಾ ಪ್ರಾಧಿಕಾರದವರು ಅರಣ್ಯ ಇಲಾಖೆಯನ್ನು ಕೇಳಿರುವುದು ನಿಜವೇ ?

ಆ) ಈ ಜಮೀನನ್ನು ಯಾವಾಗ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ನಿಜ.

ಆ) ಅರಣ್ಯ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ

೧೪೮೩ (೨೯೦೬) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೮ನೇ ಇಸವಿಯಲ್ಲಿ ಕೇಂದ್ರ ಸರ್ಕಾರವು ಎಷ್ಟು ಕಿಲೋಮೀಟರು ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡಲು ರಾಜ್ಯ ಸರ್ಕಾರಕ್ಕೆ ಅನುಮತಿ ಕೊಟ್ಟಿದೆ ?

ಆ) ಅವುಗಳು ಯಾವುವು ಹಾಗೂ ಅವುಗಳ ಪೂರ್ಣ ವಿವರ ನೀಡುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೮ನೇ ಇಸವಿಯಲ್ಲಿ ರಾಜ್ಯದಲ್ಲಿ ಯಾವ ರಸ್ತೆಗಳನ್ನೂ ಹೊಸ ರಾಷ್ಟ್ರೀಯ ಹೆದ್ದಾರಿ ಗಳೆಂದು ಕೇಂದ್ರ ಸರ್ಕಾರ ಘೋಷಿಸಿಲ್ಲ.

ಆ) (ಅ) ನಲ್ಲಿ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಏತ ನೀರಾವರಿ ಯೋಜನೆಗಳು

೧೪೮೪ (೨೯೦೨) ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೬-೮೭, ೧೯೮೭-೮೮, ೧೯೮೮-೮೯ನೇ ಸಾಲಿನಲ್ಲಿ ಎಷ್ಟು ಏತ ನೀರಾವರಿ ಯೋಜನೆ ಯನ್ನು ಮಾಡಿದ್ದೀರಿ ?

ಆ) ಅವುಗಳಲ್ಲಿ ಎಷ್ಟು ಪೂರ್ಣಗೊಂಡಿವೆ ಮತ್ತು ಯಾವ ಯಾವ ಪ್ರದೇಶಗಳಲ್ಲಿ ಪೂರ್ಣ ಗೊಳಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಕ್ರಮವಾಗಿ ೫೭, ೪ ಮತ್ತು ೨ ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಲಾಗಿದೆ.